ವಿಶೇಷ ಲೇಖನ

# ಮಾಯಾ: ಮರೆತುಹೋದ ನಾಗರಿಕತೆ

ಡಾ. ಎಚ್. ಪಾಂಡುರಂಗ ವಿಠಲ

**ಚಕ್ರ** ಹಾಗೂ ಲೋಹದ ಉಪಕರಣಗಳ ಬಳಕೆ ಗೊತ್ತಿಲ್ಲದ, ನವಶಿಲಾಯುಗದ ತಂತ್ರಜ್ಞಾನದಿಂದಲೇ ಅದ್ಭುತಗಳನ್ನು ಸಾಧಿಸಿದ ಮಾಯಾ ನಾಗರಿಕತೆ ಕ್ರಿ.ಶ. ಹದಿನಾರನೇ ಶತಮಾನದವರೆಗೂ ಇಂದಿನ ದಕ್ಷಿಣ ಮೆಕ್ಸಿಕೋ, ಗ್ವಾಟೆಮಾಲಾ ಪ್ರದೇಶಗಳಲ್ಲಿ ಜೀವಂತವಾಗಿತ್ತು. ಇಂದಿಗೂ ಮಾಯಾ ಜನಾಂಗದ ಜನರು ಇದ್ದರೂ, ಅವರು ತಮ್ಮ ಹಿಂದಿನ ಸಂಸ್ಕೃತಿ, ನಾಗರಿಕತೆಗಳನ್ನು ಮರೆತು, ಸ್ಪ್ಯಾನಿಷ್ ಮಾತನಾಡುವ ಕ್ರೈಸ್ತರಾಗಿದ್ದಾರೆ. ಬರಡು ಪ್ರದೇಶದಲ್ಲಿ ಜೀವಿಸುವ ಈ ಕಷ್ಟಜೀವಿಗಳಿಗೆ ತಮ್ಮ ಹಿಂದಣ ವೈಭವದ ನೆನಪೂ ಬೇಡವಾಗಿದೆ.

ಚಿತ್ರಲಿಪಿ, ಖಗೋಳಶಾಸ್ತ್ರ, ಗಣಿತ, ಪಂಚಾಂಗಗಳಲ್ಲಿ ಪರಿಣತರಾಗಿದ್ದ ಮಾಯಾ ನಾಗರಿಕತೆಯ ಜನರು ಮೆಟ್ಟಿಲು ಮೆಟ್ಟಿಲಾಗಿರುವ ಪಿರಮಿಡ್‌ಗಳನ್ನು ಕಟ್ಟಿ ತುದಿಯಲ್ಲಿ ದೇವಸ್ಥಾನ ನಿರ್ಮಿಸಿದರು. ಅವ ಮಣ್ಣಿನ ಕಲೆ, ಕಸೂತಿ ಶಿಲ್ಪಗಳಲ್ಲಿ ತುಂಬ ಉನ್ನತಿ ಸಾಧಿಸಿದ್ದರು. ತಿಕಾಲ್‌ನಲ್ಲಿರುವ ಧಾರ್ಮಿಕ ಕಟ್ಟಡಗಳ ಸಂಕೀರ್ಣದಲ್ಲಿ ದೈತ್ಯ ಜಾಗ್ವರ್ (ಚಿರತೆ ಜಾತಿಯ ಪ್ರಾಣಿ) ಎಂದು ಹೆಸರಾದ ಕ್ರಿ.ಶ. ೮ನೆಯ ಶತಮಾನದಲ್ಲಿ ಕಟ್ಟಿದ ಪಿರಮಿಡ್ ಸೊಗಸಾಗಿದೆ. ಇಂತಹ ಪಿರಮಿಡ್‌ಗಳನ್ನು ಏರಿ ದೇವಾಲಯಕ್ಕೆ ಹೋಗಬಲ್ಲವರು ಅರ್ಚಕರು ಮಾತ್ರ; ಜನಸಾಮಾನ್ಯರು ಕೆಳಗೇ ನಿಂತು ಧಾರ್ಮಿಕ ಕಲಾಪಗಳನ್ನು ನೋಡುತ್ತಿದ್ದರು. ದೇವಾಲಯ ಮತ್ತಿತರ ಕಟ್ಟಡಗಳ ಸ್ತಂಭಪೀಠ ಮೊದಲಾದ ಭಾಗಗಳಲ್ಲಿ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಅವರು ನಂಬಿಕೆ ಇಟ್ಟಿದ್ದ ೧೩ ಅಂತರಿಕ್ಷ ಲೋಕಗಳು ಹಾಗೂ ೯ ಪಾತಾಳ ಲೋಕಗಳ ದೇವದೇವಿಯರು ಮತ್ತು ಹಲವಾರು ಧಾರ್ಮಿಕ ಸನ್ನಿವೇಶಗಳನ್ನು ಈ ಶಿಲ್ಪಗಳಲ್ಲಿ ಕಾಣಬಹುದು.

ಶಿಲ್ಪಗಳು ಮತ್ತು ಆಭರಣಗಳನ್ನು ಧರಿಸಿದ ಆಕೃತಿಗಳಲ್ಲದೆ ಮಾಯಾ ಚಿತ್ರಲಿಪಿಯೂ ವಿಶಿಷ್ಟವಾಗಿದೆ. ಸುಮಾರು ೮೫೦ ಸಂಕೇತಗಳುಳ್ಳ ಈ ಚಿತ್ರಲಿಪಿ ಭಾವರೂಪಾತ್ಮಕ, ಭಾಗಶಃ ಧ್ವನ್ಯಾತ್ಮಕ. ಮರದ ತೊಗಟೆಯನ್ನು ನುಣುಪಾಗಿಸಿ, ತೆಳುವಾಗಿ ಸುಣ್ಣ ಲೇಪಿಸಿ ಅದರ ಮೇಲೆ ಈ ಲಿಪಿಯಲ್ಲಿ ಬರೆಯುತ್ತಿದ್ದರು, ರೇಖಾಚಿತ್ರಗಳನ್ನೂ ಸೇರಿಸುತ್ತಿದ್ದರು. ಮಾಯನ್ನರನ್ನು ಸ್ಪೇನ್ ಆಕ್ರಮಣಕಾರಿಗಳು ಸಂಪೂರ್ಣ ಸೋಲಿಸಿದ ಮೇಲೆ "ಈ ಅಧಾರ್ಮಿಕ ಸಾಹಿತ್ಯವನ್ನು ಸುಡಿ" ಎಂದು ಕ್ರೈಸ್ತ ಬಿಷಪ್ ಡಿಯೋಗೋ ಡಿ ಲಂಡಾ ಆಜ್ಞೆ ನೀಡಿದ. ಈ ರಾಶಿ ಮೂರು ದಿನ ಎಡೆಬಿಡದೆ ಉರಿಯಿತಂತೆ. ಆದರೂ ಕುತೂಹಲಕ್ಕಾಗಿ ಮೂರು ಹಸ್ತಪ್ರತಿಗಳನ್ನು ಉಳಿಸಿದರು. ಇವು ಇರುವ ನಗರದ ಹೆಸರಿನ ಮೇಲೆ ಇವನ್ನು **ಡ್ರೆಸ್ಡೆನ್ ಕೋಡೆಕ್ಸ್, ಮ್ಯಾಡ್ರಿಡ್ ಕೋಡೆಕ್ಸ್, ಪ್ಯಾರಿಸ್ ಕೋಡೆಕ್ಸ್** ಎಂದು ಕರೆದಿದೆ. ಈಚೆಗೆ ಮಾಯಾ ಚಿತ್ರಲಿಪಿಯನ್ನು ಅರ್ಥೈಸಲಾಗಿದೆ.

ಮಾಯಾ ಜನ ಸೊನ್ನೆಯನ್ನು ಸ್ವತಂತ್ರವಾಗಿ ಕಂಡುಹಿಡಿದಿದ್ದರು. ದಾರಗಳಿಗೆ ಗಂಟುಹಾಕುವ ಮೂಲಕ ಕ್ಲಿಷ್ಟವಾದ ಲೆಕ್ಕಾಚಾರಗಳನ್ನು ಮಾಡಬಲ್ಲವರಾಗಿದ್ದರು. ಸೌರವರ್ಷದ ಅವಧಿ, ಚಾಂದ್ರಮಾನ ಮಾಸದ ಅವಧಿ, ಗ್ರಹಣಗಳನ್ನು ಕರಾರುವಾಕ್ಕಾಗಿ ಲೆಕ್ಕಹಾಕುತ್ತಿದ್ದರು. ತೊಡೆ, ಮೊಣಕಾಲು ಮೊಣಕೈಗಳಿಂದ ಆಡಬೇಕಿದ್ದ ಬಾಸ್ಕೆಟ್ ಬಾಲ್ ತರಹದ ಆಟವನ್ನೂ ಆಡುತ್ತಿದ್ದರು. ಇದು ಧಾರ್ಮಿಕ ಕ್ರಿಯೆಯೂ ಆಗಿತ್ತು! ಆಟದಲ್ಲಿ ಮೇಲ್ಗೈ ಸಾಧಿಸಿದವರು ಪ್ರೇಕ್ಷಕರಲ್ಲಿ ಯಾರಾದರೂ ಒಬ್ಬನನ್ನು ಹಿಡಿದು ಅವನ ಆಸ್ತಿಯನ್ನು ಕಿತ್ತುಕೊಳ್ಳಬಹುದಿತ್ತು! ಜನಪ್ರಿಯ ಧಾರ್ಮಿಕ ನರ್ತನಗಳಲ್ಲಿ ಗಂಡಸರು ಮಾತ್ರ ಪಾಲ್ಗೊಳ್ಳುತ್ತಿದ್ದರು.



ದೈತ್ಯ ಜಾಗ್ವರ್ ಪಿರಮಿಡ್

ಮಾಯಾ ನಗರಗಳು ಜನರು ಬಂದು ಹೋಗುವ ಧಾರ್ಮಿಕ ಆಡಳಿತ ಹಾಗೂ ವ್ಯಾಪಾರಗಳ ಕೇಂದ್ರಗಳಾಗಿದ್ದು ಅಲ್ಲಿ ಯಾರೂ ವಾಸಮಾಡುವಂತಿರಲಿಲ್ಲ. ಕೆಲವು ಕಾಲ ಅರ್ಚಕರು, ಆಡಳಿತಗಾರರಷ್ಟೆ ವಾಸಿಸುತ್ತಿದ್ದರು. ಇವರ ಮಕ್ಕಳಿಗಷ್ಟೆ ಶಾಲಾ ಶಿಕ್ಷಣ ದೊರಕುತ್ತಿತ್ತು. ಜನಸಾಮಾನ್ಯರು ಮನೆಯಲ್ಲೇ ತಂದೆತಾಯಂದಿರಿಂದ ಶಿಕ್ಷಣ ಪಡೆಯುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲೂ ಮನೆಗಳು ಗುಂಪಾಗಿ ಇರದೆ ಬಿಡಿಬಿಡಿಯಾಗಿ ಇರುವ, ಗುಡಿಸಲುಗಳಾಗಿದ್ದವು.

ಮಾಯಾ ಇತಿಹಾಸವನ್ನು ಕ್ರಿ.ಪೂ.೫೦೦೦– ಕ್ರಿ.ಪೂ. ೨೨೫ರವರೆಗಿನ **ಬೆಳವಣಿಗೆಯ ಯುಗ**, ಕ್ರಿ.ಪೂ.೨೨೫– ಕ್ರಿ.ಶ.೯೨೫ ರವರೆಗಿನ **ಸಾಂಸ್ಕೃತಿಕ ಯುಗ** ಮತ್ತು ಕ್ರಿ.ಶ. ೧೨೦೦–೧೫೪೦ ರವರೆಗಿನ ಅವನತಿಯ

*ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಕನ್ನಡ ಪ್ರಾಧ್ಯಾಪಕರು, ಉತ್ತಮ ಬರಹಗಾರರು.*

**ಯುಗ** ಎಂದು ವಿಭಾಗಿಸುತ್ತಾರೆ. ಕ್ರಿ.ಶ.೯೨೫ ರ ಸುಮಾರಿಗೆ ಮಾಯಾ ಜನ ನಿಗೂಢವಾಗಿ ತಮ್ಮ ಧಾರ್ಮಿಕ ಆಚರಣೆಯ ನಗರಗಳನ್ನು ತ್ಯಜಿಸಿದರು. ಅರ್ಚಕರು ಹಾಗೂ ಆಡಳಿತಗಾರರ ವಿರುದ್ಧ ರೈತರು ಬಂಡಾಯವೆದ್ದದ್ದರಿಂದ ಈ ನಗರಗಳು ಹಾಳುಬಿದ್ದವೆಂದು ಇತಿಹಾಸಜ್ಞರು ಹೇಳುತ್ತಾರೆ.

ಕ್ರಿ.ಶ.೩೭೮ ರಲ್ಲಿ ಮೆಕ್ಸಿಕೋದ ಟಿಯೋಟಿ ಹುಆಕನ್ ಪಟ್ಟಣದಿಂದ ರಾಜಪ್ರತಿನಿಧಿಯೊಬ್ಬ ಮಾಯಾ ಜನರ ವಾಕಾ ಎಲ್ ಪೆರು ಎಂಬ ನಗರಕ್ಕೆ ಬಂದ. ಆತನಿಗೆ 'ನವಜಾತ ಅಗ್ನಿ' ಎಂಬ ಹೆಸರು. ಈತ ತನ್ನ ಸೈನ್ಯದೊಂದಿಗೆ ಎಲ್ಲ ನಗರಗಳಿಗೂ ಭೇಟಿ ಕೊಟ್ಟನು; ಹೊಸ ಮಿತ್ರತ್ವವನ್ನು ಸ್ಥಾಪಿಸಿ ನಾಗರಿಕತೆಯು ತೀವ್ರಗತಿಯಲ್ಲಿ ಬೆಳೆಯುವಂತೆ ಮಾಡಿದನು. ಈ ಸಮೃದ್ಧಿ, ನಗರಗಳ ನಿರ್ಮಾಣಕ್ಕೆ ಎಡೆ ಮಾಡಿತ್ತು. ನವಜಾತ ಅಗ್ನಿಯು ವಿವಿಧ ಮಾಯಾ ರಾಜರುಗಳ ನಡುವೆ ಮೈತ್ರಿ ಏರ್ಪಡಿಸಿ ಅವರುಗಳು ರಾಜಕೀಯವಾಗಿ ಒಗ್ಗೂಡುವಂತೆ ಮಾಡಿದ.

ಆರನೆಯ ಶತಮಾನದಲ್ಲಿ ಉತ್ತರದ ಕಲಾಕ್‌ಮುಲ್ ನಗರದ ಆಡಳಿತಗಾರರು ಶಕ್ತಿವಂತರಾಗಿ ಮಾಯಾ ಜನಾಂಗದಲ್ಲಿ ಎರಡು ಬಣಗಳಾದವು. ಈ ಸ್ಪರ್ಧೆ ಹೆಚ್ಚಿನ ಸಾಧನೆಗೂ, ಕೊನೆಗೆ ನಾಗರಿಕತೆಯ ಅಳಿವಿಗೂ ಕಾರಣವಾಯಿತು. ಯುದ್ಧಗಳಿಂದ ನಗರಗಳು ಪ್ರಾಮುಖ್ಯ ವನ್ನು ಕಳೆದುಕೊಂಡು ಹಾಳಾದವು, ಜನಸಂಖ್ಯೆ ಕ್ಷೀಣಿಸಿತು. ತಿಕಾಲ್ ನಗರ ರಾಜ್ಯ ಮಾತ್ರ ವೈಭವವನ್ನು ಉಳಿಸಿಕೊಂಡಿದ್ದರೂ ಎಂಟನೆಯ ಶತಮಾನದ ಹೊತ್ತಿಗೆ ಜನರು ಕಡಿಮೆಯಾಗಿ, ನಾಶವಾಯಿತು. ಕ್ರಿ.ಶ. ೧೦೦೦ ದ ಹೊತ್ತಿಗೆ ಸಾಂಸ್ಕೃತಿಕ ಯುಗ ಅಂತ್ಯವಾಯಿತು.

ಈ ನಾಶಕ್ಕೆ ಕಾರಣವೇನು? ಪ್ರಾಕೃತಿಕ ದುರಂತವೆ ಅಥವಾ ಮಧ್ಯಯುಗೀನ ಯುರೋಪ್ ಜನಸಂಖ್ಯೆಯಲ್ಲಿ ಇಳಿತ ಕಾಣಿಸಿದ 'ಕಪ್ಪು ಸಾವು' ಎಂಬ ರೋಗವೇ? ಅಥವಾ ಇತರ ಅಮೆರಿಕಾ ಆದಿವಾಸಿಗಳ ಮೂಲೋತ್ಪಾಟನಕ್ಕೆ ಕಾರಣವಾದ, ಸ್ಪೇನ್ ಸೈನಿಕರಿಂದ ಬಳುವಳಿಯಾಗಿ ಬಂದ ಸಿಡುಬಿನಂತಹ ರೋಗವೆ? ಇದಾವುದಾ-ದರೂ ಇರಬಹುದು.

ಆದರೆ ಮುಖ್ಯವಾಗಿ ನಾಯಕರ ಮೇಲೆ ವಿಶ್ವಾಸ ಕಳೆದುಹೋಗಿ ಅರಾಜಕತೆ ಹುಟ್ಟಿದ್ದು ಮತ್ತು ವ್ಯವಸ್ಥೆ ನಿಯಂತ್ರಣ ತಪ್ಪಿಹೋದದ್ದು ಮುಖ್ಯ ಕಾರಣಗಳು ಎಂದು ಹೇಳಬಹುದು. ಆಳುವ ವರ್ಗದ ಶ್ರೀಮಂತರ ಸಂಖ್ಯೆ ಹೆಚ್ಚುತ್ತ ಹೋದಂತೆ ತೆರಿಗೆಯ ಪ್ರಮಾಣವೂ ಹೆಚ್ಚಿತು. ಯುದ್ಧಗಳ ತಾತ್ಕಾಲಿಕ ಜಯ, ಕೊರತೆಗಳ ಆ ನಾಡಿನಲ್ಲಿ ನಿಷ್ಪ್ರಯೋಜಕ ಎನಿಸಿತು. ಉನ್ನತ ವರ್ಗದವರು ತಮ್ಮ ಸಂಪತ್ತಿನೊಡನೆ ಕ್ಯಾನ್‌ಕುನ್ ಎಂಬ ರೇವು ಪಟ್ಟಣಕ್ಕೆ ಹೋಗಿ ನೆಲೆಸತೊಡಗಿದರು. ತಾಚ್ ಚಾನ್ ಆಹ್‌ಕ್ ಎಂಬ ಯುವಕ ಈ ನಗರ ರಾಜ್ಯದ ರಾಜ ನಾಗಿದ್ದ. ಮೊದಲು ಆಯಕಟ್ಟಿನ ವ್ಯಾಪಾರಿ ಕೇಂದ್ರವಾಗಿದ್ದ ಈ ನಗರವನ್ನು ಅವನು ಅದ್ಭುತ ಉತ್ಸವಗಳ ಕೇಂದ್ರವಾಗಿಸಿದನು. ಈತ ಯುದ್ಧ ಮಾಡದೆ ಕೇವಲ ಸ್ನೇಹ ಸಂಧಾನಗಳಿಂದಲೇ ತನ್ನ ರಾಜ್ಯವು, ಅಳಿಯುತ್ತಿದ್ದ ಮಾಯಾ ನಾಗರಿಕತೆಯ ಅತಿ ಶ್ರೇಷ್ಠ ಕೇಂದ್ರವಾಗಿರುವಂತೆ ನೋಡಿಕೊಂಡಿದ್ದನು. ಆದರೆ ಈ ವೈಭವ ಮತ್ತು ಸಾಂಪ್ರದಾಯಿಕ ಆಚರಣೆಗಳು ಮಾಯಾ ನಾಗರಿಕತೆಯನ್ನು ಎತ್ತಿ ನಿಲ್ಲಿಸುವಲ್ಲಿ ಸೋತವು.

ವೈಭವವನ್ನು ಕಳೆದುಕೊಂಡರೂ ನಿರಂತರ ಆಂತರಿಕ ಸಂಘರ್ಷ ಗಳ ನಡುವೆ ೧೨೦೦ ರ ಸುಮಾರಿಗೆ ಯೋಧರುಗಳು ಮಾಯಪನ್ ಎಂಬ ಹೊಸ ರಾಜಧಾನಿ ಸ್ಥಾಪಿಸಿ ಆಡಳಿತ ನಡೆಸಿದರು. ಸಾಂಸ್ಕೃತಿಕ ರಂಗದಲ್ಲಿ ಅವನತಿ, ಇತರ ನಗರಗಳನ್ನು ನಿಯಂತ್ರಿಸಲಾಗದ ಅಸಹಾಯಕ ಪರಿಸ್ಥಿತಿ, ಬರ, ಜನಸಂಖ್ಯೆಯ ಇಳಿತ – ಇವೆಲ್ಲವೂ ಇದ್ದರೂ ನಾಗರಿಕತೆ ಜೀವ ಹಿಡಿದುಕೊಂಡಿತ್ತು. ೧೫೦೨ ರಲ್ಲಿ ಸ್ಪೇನ್ ದೇಶೀಯರು ಕಾಲಿಟ್ಟದ್ದೂ ಮಾಯಾ ನಾಗರಿಕತೆಯ ವಿನಾಶಕ್ಕೆ ಕಾರಣವಾಯಿತು. ೧೫೨೩ ರಲ್ಲಿ ಪೆಡ್ರೊ ಡಿ ಅಲ್ವಾರಾಡೋ ನೇತೃತ್ವದ ಸೈನ್ಯ ಗ್ವಾಟೆಮಾಲಾದ ಬಹುಭಾಗವನ್ನು ಆಕ್ರಮಿಸಿತು. ಫ್ರಾನ್ಸಿಸ್ಕೋ ಡಿ ಮಾಂಟಿಗೋ ಇನ್ನೆರಡು ದಶಕಗಳಲ್ಲಿ ಯುಕಟಾನ್ ಅನ್ನು ವಶಪಡಿಸಿಕೊಂಡ.

ಕೊನೆಗೆ ೧೭ ನೆಯ ಶತಮಾನದಲ್ಲಿ ಪೇಟನ್ನಿನ ಇಟ್ಜಾ ಜನರು ಭೀಕರ ಹೋರಾಟ ನಡೆಸಿ ಶರಣಾದಾಗ, ಮಾಯಾ ನಾಗರಿಕತೆ ಅಂತ್ಯವಾಯಿತು. ಇಡೀ ದೇಶದ ಜನರನ್ನು ಕೊಂದು ಅವರ ಆಸ್ತಿಯನ್ನು ಕಸಿದುಕೊಂಡು, ಅಳಿದುಳಿದವರನ್ನು ಗುಲಾಮರನ್ನಾಗಿಸಿ, ಎಲ್ಲಾ ದಾಖಲೆಗಳನ್ನೂ ಸುಟ್ಟುಹಾಕಿದ ಮೇಲೆ – ಆಕ್ರಮಣಕಾರರು ಹೇಳುವುದೇ ಚರಿತ್ರೆಯಾಗುವುದಲ್ಲವೆ? ದಕ್ಷಿಣದ ಇನ್ಕಾ ನಾಗರಿಕತೆಯ ನಾಶದ ಬಗ್ಗೆ ಹೆಚ್ಚು ವಿವರಗಳು ಸಿಕ್ಕಲು ಕಾರಣ, ಅಲ್ಲಿ ಸಿಕ್ಕ ಚಿನ್ನ – ಬೆಳ್ಳಿಗಳ ಸಮೃದ್ಧಿ. ಮಾಯಾ ನಾಗರಿಕತೆ ಆಗಲೇ ಬಡತನದ ಸ್ಥಿತಿಗೆ ಬಂದಿದ್ದರಿಂದ, ಕೊಳ್ಳೆಯ ವಿವರಗಳೂ ಹೆಚ್ಚಾಗಿ ತಿಳಿದು ಬರುವುದಿಲ್ಲ. ಇನ್ಕಾ ಹಾಗೂ ಅಜ್‌ಟೆಕ್ ಸಂಸ್ಕೃತಿಗಳನ್ನು ಹೇಗೆ ಮೋಸದಿಂದ ಹಾಳುಗೆಡವಿದರು, ಮನುಷ್ಯರನ್ನು ಪ್ರಾಣಿಗಳಂತೆ ಕೊಂದುಹಾಕಿ, ಪ್ರಾಚೀನ ಕಲೆ, ಜ್ಞಾನಭಂಡಾರ, ದೇವಾಲಯಗಳನ್ನು ಹೇಗೆ ನಾಶಮಾಡಿದರು ಎಂಬ ವಿವರಗಳನ್ನು ಓದಿ, ಮಾಯಾ ನಾಗರಿಕತೆಯ ಪಾಡು ಹೀಗೇ ಕೊನೆಗೊಂಡಿತೆಂಬ ತೀರ್ಮಾನಕ್ಕೆ ಬರಬೇಕಷ್ಟೆ. ಮೆಕ್ಸಿಕೋದ ಮೊದಲ ಆರ್ಚ್ ಬಿಷಪ್ ಡಾನ್ ಜುವಾನ್ ಡಿ ಜುಮರ್‍ರಾಗಾನು ಸುತ್ತಮುತ್ತಣ ಸ್ಥಳಗಳಿಂದ, ಮುಖ್ಯವಾಗಿ ತೆಜ್‌ಕುಕೋ ದಿಂದ ಸಂಗ್ರಹಿಸಿದ ವರ್ಣಚಿತ್ರಗಳನ್ನು ಬೆಟ್ಟದಂತೆ ರಾಶಿಹಾಕಿಸಿ ಬೆಂಕಿಹಾಕಿಸಿದನಂತೆ! ಮಾಯಾ ಜನಾಂಗದವರೆಂದು ಭಾವಿಸಲಾಗುವ ಈ ಭಾಗದ ಜನರೆಲ್ಲ, ಈಗ ತಮ್ಮ ಈ ಮೂಲವನ್ನು ಮರೆತು, ಬಡ ಕ್ರೈಸ್ತರಾಗಿ ಜೀವಿಸುತ್ತಿದ್ದಾರೆ. ಇಂದು ಇವರ ಚರಿತ್ರೆ ೧೬ನೇ ಶತಮಾನದ ಸ್ಪೇನ್ ಆಕ್ರಮಣದಿಂದ ಮೊದಲಾಗಿದೆ; ಭಾಷೆ ಸ್ಪಾನಿಷ್ ಹಾಗೂ ಸಂಸ್ಕೃತಿ ಮತ್ತು ಜೀವನಗಳು ಪಾಶ್ಚಾತ್ಯ ರೀತಿಯದ್ದಾಗಿವೆ.

ತಾವೇ ಶ್ರೇಷ್ಠ ಜನಾಂಗ, ತಮ್ಮದೇ ಶ್ರೇಷ್ಠ ಧರ್ಮ, ಸಂಸ್ಕೃತಿ, ನಾಗರಿಕತೆ, ಜ್ಞಾನ; ಉಳಿದ ಎಲ್ಲರೂ ಪ್ರಾಣಿಗಳು, ಅವರನ್ನು ಮೋಸದಿಂದ, ಅನೀತಿಯಿಂದ ಶಕ್ತಿಯ ಬಲದಿಂದ ಗೆದ್ದು ಶೋಷಿಸಿ ಅವರ ಧರ್ಮ, ಸಂಸ್ಕೃತಿಗಳನ್ನು ನಾಶಮಾಡಬೇಕು ಎಂದು ಹೊರಟ ಕ್ರೌರ್ಯ, ಅಮಾನವೀಯತೆಗಳೇ ಬಂಡವಾಳವಾದ ಜನರಿಂದ ಮಾನವ ವಿಕಾಸಕ್ಕೆ ಹಾನಿಯೇ ಸರಿ. ಇವರಿಂದ ನಷ್ಟವಾದ ಪುರಾತನ ಜ್ಞಾನ, ಸಂಸ್ಕೃತಿಗಳ ಲಾಭ ಇಂದಿನ ಜನಾಂಗಕ್ಕೆ ಸಿಕ್ಕಿದ್ದರೆ ನಾವು ನಾಗರಿಕತೆಯ ಹಾದಿಯಲ್ಲಿ ಇನ್ನಷ್ಟು ಮುನ್ನಡೆಯಬಹುದಿತ್ತು.

✪